ಶ್ರೀ ಎಸ್. ಬಂಗಾರಪ್ಪ.—ಈ ಭೂಮಿ ವಿಚಾರ ಸ್ಪೆಷಲ್ ಡಿ. ಸಿ. ಮುಂದೆ ಇದೆ.

SRI AZEEZ SAIT —The Hon. Chief Minister will be in a position to clarify that after independence there is an agreement between the Government of India and the rulers of Mysore about the Mysore palace. As far as Bangalore palace is concerned, we have been talking and we have to be a little considerate taking into consideration the services and the patronage given by the old rulers to the State. This matter is certainly in the hands of the State Government. It has got something to do with the Central Government. There were some discussions between the rulers of Mysore on the one hand and the Central and State Government on the other. A Bill was prepared in this behalf and sent to the Central Government which had come back.

Mr. SPEAKER.—This is question hour. There is no scope for elaborate discussion. We have already spent 15 minutes for this question. If the hon. Members want I will allow half-an-hour discussion. Please co-operate with me.

Mekedatu as Tourist Centre in Kanakapur Taluk

835. SRI K·L. SHIVALINGE GOWDA (Sathnur).—Will the Chief Minister be pleased to state.—

(a) whether Government is aware of the request to make 'Sangama' (Mekedatu) in Uyamballi Hobli of Kanakapura taluk as a tourist centre ;

(b) if so, action taken by the Government in this regard ?

SRI R. GUNDU RAO (Chief Minister).—

(a) Yes.

(b) Several schems are under contemplation of the Government to improve this place.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ತಮ್ಮ ಉತ್ತರದ ಈ ಸ್ಥಳವನ್ನು ಉತ್ತಮ ಪಡಿಸುವುದಕ್ಕೆ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆಯೆಂದು ಹೇಳುತ್ತಿದ್ದೀರಿ. ಯಾವ ಯಾವ ಯೋಜನೆಗಳನ್ನು ಹಾಕಿಕೊಂಡು ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ?

ಶ್ರೀ ಆರ್. ಗುಂಡೂರಾವ್.—ಅಲ್ಲಿಗೆ ಬರತಕ್ಕ ಪ್ರವಾಸಿಗರಿಗೆ ಉಳಿದುಕೊಳ್ಳಲು ಕಟ್ಟಡಗಳನ್ನು ಕಟ್ಟಿಸುವುದು ರಸ್ತೆಗಳನ್ನು ಸ್ವಲ್ಪ ರಿಪೇರಿ ಮಾಡಿಸುವುದು, ಮತ್ತು ಅಲ್ಲಿಗೆ ಬರತಕ್ಕ ಪ್ರವಾಸಿಗರಿಗೆ ಊಟ ವಸತಿ ವ್ಯವಸ್ಥೆ ಮಾಡುವುದು ಇವೇ ಮುಂತಾದ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈಗಾಗಲೇ ಈ ಬಗ್ಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ?

ಶ್ರೀ ಆರ್. ಗುಂಡೂರಾವ್.—ಈ ವರ್ಷ ಹಣವನ್ನು ಖರ್ಚು ಮಾಡಿರುವುದಿಲ್ಲ. ಆ ರೀತಿ ಹಣ ಖರ್ಚು ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದ್ದು ಅದು ಸರ್ಕಾರದ ಮನಸ್ಸಿನಲ್ಲಿದೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಅಲ್ಲಿ ಹೋಗಲು ರಸ್ತೆಗಳು ಉತ್ತಮವಾಗಿಲ್ಲ. ಈ ಯೋಜನೆಯಲ್ಲಿ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನಪಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಸರ್ಕಾರ ಈ ಜಾಗವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡ ಬೇಕೆಂದು ತೀರ್ಮಾನಿಸಿದ ಮೇಲೆ ರಸ್ತೆಗಳ ರಿಪೇರಿ ಬಗ್ಗೆಯೂ ಸರ್ಕಾರ ಗಮನ ಕೊಡುತ್ತದೆ.

ಶ್ರೀ ಸಿ. ಆಪ್ಪಾಜಿ.—ಹಲವಾರು ಯೋಜನೆಗಳನ್ನು ಹಾಕಲಾಗಿದೆಯೆಂದು ಹೇಳಿದ್ದೀರಿ. ಆದರೆ ಯಾವ ಒಂದು ಯೋಜನೆಗಳು ಕಾರ್ಯಗತವಾಗಿಲ್ಲ. ಈ ದಿನ ನೂರಾರು ಪ್ರವಾಸಿಗರು ಅಲ್ಲಿಗೆ ಬರುತ್ತಿದ್ದಾರೆ. ಆವಕಾರಣ ತಮ್ಮ ಯೋಜನೆಯನ್ನು ತ್ವರಿತಗತಿಯಲ್ಲಿ ಕೈಗೊಂಡು ಪೂರೈಸುತ್ತೀರಾ?

ಶ್ರೀ ಆರ್. ಗುಂಡೂರಾವ್ —ತ್ವರಿತವಾಗಿಯೇ ಮಾಡಬೇಕೆಂದು ೧೯೮೦-೮೧ನೇ ಸಾಲಿನಲ್ಲಿ ಈ ಬಗ್ಗೆ ಯೋಜನೆ ಮಾಡಿ, ಕಾರ್ಯಕ್ರಮದ ಬಗ್ಗೆ ಸರ್ಕಾರ ಆಸಕ್ತಿ ವಹಿಸಿದೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಹಿಂದೆ ಈ ಬಗ್ಗೆ ಸರ್ಕಾರ ಆಶ್ವಾಸನೆ ಕೊಟ್ಟು ೨ ವರ್ಷ ವಾದರೂ ಏನೂ ಮಾಡಿಲ್ಲ. ಈಗಲಾದರೂ ಯೋಜನೆ ಪೂರೈಸುತ್ತೀರಾ?

ಶ್ರೀ ಆರ್. ಗುಂಡೂರಾವ್.—ಇಲ್ಲಿ ಭವಿಷ್ಯದ ತಪ್ಪುವ ಪ್ರಶ್ನೆ ಇಲ್ಲ. ೧೯೮೦-೮೧ ನೇ ಸಾಲಿನಲ್ಲಿ ಇದನ್ನು ಪ್ರವಾಸೀ ಕೇಂದ್ರವನ್ನಾಗಿ ಮಾಡಲು ಸರ್ಕಾರ ಉದ್ದೇಶಿಸಿದೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯೂ ಯೋಜನೆಯನ್ನು ಹಾಕಿಕೊಂಡಿದೆ. ಸರ್ಕಾರ ಇದನ್ನು ಜರೂರು ಮಾಡಿಕೊಡುತ್ತದೆ.

Interstate Seniority list of Revenue Department Officials promotion benefits

539 SRI M. H. BEKINALKAR (Sindgi).—Will the Minister for Revenue and Agriculture be pleased to state.—

(a) whether it is a fact that the Interstate Seniority list of Revenue Department officials is not finalised as yet;

(b) if so, the action taken to give relief to those who have retired and relieved before the finalisation without availing the promotional benefits.

(c) when the seniority list will be completed and published?

SRI S. BANGARAPPA (Minister for Revenue and Agriculture)

(a) No. The ISS lists of Revenue Department officials have already been finalised during 1979.

(b) The promotional benefits, if any, due to those officers who have retired in the course of finalisation of ISS lists, will be extended to them in accordance with the provisions of the KCS (PP) Act, 1973.

(c) Does not arise in view of reply to clause (a).

SRI M. H. BEKINALKAR.—Sir, how many appeals are pending till now and what is the number of writ petitions in the High Court?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಇಲ್ಲಿ ರೆವಿನ್ಯೂ ಇಲಾಖೆಯ ನೌಕರರ ಅಂತರ್ ರಾಜ್ಯಜ್ಯೇಷ್ಠತಾ ಪಟ್ಟಿಯ ಬಗ್ಗೆ ಪ್ರಶ್ನೆ ಕೇಳಿದ್ದು ಆ ಬಗ್ಗೆ ಉತ್ತರವನ್ನು ಕೊಡಲಾಗಿದೆ. ಆದರೆ ಮಾನ್ಯ ಸದಸ್ಯರು ಈಗ ಏನು ಪ್ರಶ್ನೆಯನ್ನು ಕೇಳಿದ್ದಾರೆ ಈ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಹಾಕಿದರೆ ಅದಕ್ಕೆ ಉತ್ತರವನ್ನು ಒದಗಿಸಿಕೊಡಬಹುದು.